


ವಂತೆ ಪ್ರೇರೇಪಿಸುತ್ತದೆ. ಸಕಲ ವಿಧದ ಜ್ಞಾನವೂ, ಅದು ಲೌಕಿಕವಾಗಿರಲಿ ಅಥವಾ ಆಧ್ಯಾತ್ಮಿಕವಾಗಿರಲಿ, ಮನಸ್ಸಿನಲ್ಲಿಯೇ ಇರುತ್ತದೆ. ಅನೇಕ ಸಂದರ್ಭಗಳಲ್ಲಿ ಅದು ವ್ಯಕ್ತವಾಗದೆ ಮುಚ್ಚಿ ಹೋಗಿರುತ್ತದೆ. ಅದನ್ನು ಮುಚ್ಚಿಕೊಂಡಿರುವ ಮುಸುಕು ಮೆಲ್ಲನೆ ತೆರೆಯುತ್ತಿರುವಾಗ, 'ನಾವು ಜ್ಞಾನವಂತರಾಗುತ್ತಿದ್ದೇವೆ' ಎಂದು ಹೇಳುತ್ತೇವೆ. ಯಾರ ಮನಸ್ಸಿನ ಮೇಲಣ ಮುಸುಕು ಸಂಪೂರ್ಣವಾಗಿ ಅನಾವರಣಗೊಂಡಿದೆಯೋ ಅವರು ಸರ್ವಜ್ಞರೆನಿಸುತ್ತಾರೆ.

ಸರ್ ಐಸಾಕ್ ನ್ಯೂಟನ್ ಎಂಬ ವಿಜ್ಞಾನಿಯು ಒಂದು ಸಂಜೆ ವಾಯುವಿಹಾರಕ್ಕೆಂದು ಹೊರಟವನು, ಒಂದು ಸುಂದರ ಉದ್ಯಾನವನವನ್ನು ಹೊಕ್ಕು ಕುಳಿತನು. "ಸೂರ್ಯನ ಸುತ್ತ ಗ್ರಹಗಳು ಸುತ್ತುತ್ತವೆ; ಭೂಮಿಯ ಸುತ್ತ ಚಂದ್ರನು ಸುತ್ತುತ್ತಾನೆ: ಹೀಗೆಲ್ಲ ಅವು ನಿಯತವಾಗಿ ಸುತ್ತು ಹಾಕುತ್ತಿರುವುದಕ್ಕೆ ಏನು ಕಾರಣ?" ಎಂಬ ಪ್ರಶ್ನೆ ಅವನನ್ನು ಹಲವು ದಿನಗಳಿಂದ ಕಾಡುತ್ತಿತ್ತು. ಉದ್ಯಾನವನದಲ್ಲಿ ಕುಳಿತು ಸುತ್ತಲಿನ ಪ್ರಕೃತಿಯ ಮೇಲೆ ಕಣ್ಣಾಡಿಸುತ್ತಿರುವಾಗಲೂ ಅವನ ಮನಸ್ಸು ಅದೇ ಪ್ರಶ್ನೆಯನ್ನು ಮೆಲುಕು ಹಾಕುತ್ತಿತ್ತು. ಆ ಹೊತ್ತಿಗೆ ಸರಿಯಾಗಿ ಉದ್ಯಾನವನದ ಒಂದು ಸೇಬಿನ ಮರದಿಂದ ಸೇಬಿನಹಣ್ಣಿನ ತೊಟ್ಟು ಕಳಚಿ ನೆಲಕ್ಕೆ ಬಿತ್ತು. ಅದನ್ನು ನೋಡುತ್ತಿದ್ದಂತೆಯೇ ಅವನ ಮನಸ್ಸಿಗೊಂದು ವಿಚಾರ ಮಿಂಚಿನಂತೆ ಹೊಳೆಯಿತು. "ಆಹಾ, ನನ್ನ ಪ್ರಶ್ನೆಗೆ ಉತ್ತರ ಸಿಕ್ಕಿತು" ಎಂದು ಅವನು ರೋಮಾಂಚನಗೊಂಡು ಆನಂದಪರವಶನಾದನು. "ಭೂಮಿಯು ಸೇಬನ್ನು ತನ್ನತ್ತ ಸೆಳೆಯುವುದರಿಂದ ಅದು ನೆಲಕ್ಕೆ ಬಿದ್ದಿತು. ಈ ಬಗೆಯ ಸೆಳೆತದಿಂದಲೇ ಸೂರ್ಯನು ಗ್ರಹಗಳನ್ನೂ, ಭೂಮಿಯು ಚಂದ್ರನನ್ನೂ ತನ್ನತ್ತ ಸೆಳೆಯುತ್ತಿದ್ದು, ಅವು ತಮ್ಮ ಸುತ್ತ ಸುತ್ತುವಂತೆ ಮಾಡುತ್ತಿವೆ" ಎಂದು ನಿರ್ಧರಿಸಿಕೊಂಡನು. ಸೇಬಿನಹಣ್ಣು ಮರದಿಂದ ಬಿದ್ದ ಸೂಚನೆಯೇ ಕಾರಣವಾಗಿ, ನ್ಯೂಟನ್ನನು ತನ್ನ ಮನಸ್ಸನ್ನೇ ವಿಚಾರಕ್ಕೆ ಗುರಿಪಡಿಸಿದನು. ಹಿಂದೆ ಎದ್ದಿದ್ದ ಪ್ರಶ್ನೆಯನ್ನು ಹೊಸದಾದ ರೀತಿಯಲ್ಲಿ ಕ್ರಮಪಡಿಸಿ, ಅವುಗಳಿಗಿರುವ ಪರಸ್ಪರ ಸಂಬಂಧವನ್ನು ಚಿಂತಿಸಿದನು. ಅದರ ಫಲವಾಗಿ ಅವುಗಳ ನಡುವೆ ಪರಸ್ಪರ ಸಂಬಂಧವನ್ನು ಕಲ್ಪಿಸಿಕೊಡುವ ಸೂತ್ರವೊಂದನ್ನು ಅವನ ಮನಸ್ಸು ಕಂಡುಕೊಂಡಿತು. ಅದೇ 'ಗುರುತ್ವಾಕರ್ಷಣೆ' ಎಂಬ ಹೆಸರಿನ ನಿಯಮವಾಗಿ ಕರೆಯಲ್ಪಟ್ಟಿತು.

ಚಕಮುಕಿ ಕಲ್ಲಿನಲ್ಲಿ ಬೆಂಕಿ ಅಡಗಿರುತ್ತದೆ. ಅದನ್ನು ಒಂದು ಉಕ್ಕಿನ ತುಂಡಿನೊಡನೆ ರಭಸದಿಂದ ಉಜ್ಜಿದರೆ, ಆ ಸಂಘರ್ಷಣೆಯ ಫಲವಾಗಿ ಬೆಂಕಿ ಹೊರಕ್ಕೆ ಚಿಮ್ಮುತ್ತದೆ. ಹಾಗೆಯೇ ಜ್ಞಾನವೂ ಮನಸ್ಸಿನಲ್ಲಿ ಅಡಗಿದೆ. ಹೊರಗಿನಿಂದ ದೊರೆಯುವ ಸೂಚನೆಯೇ ಆ ಜ್ಞಾನವನ್ನು ಹೊರಗೆಡಹುವ ಘರ್ಷಣೆಯೆನ್ನಬಹುದು. "ಗುರುತ್ವಾಕರ್ಷಣೆಯೆಂಬುದು ಎಲ್ಲಿಯೋ ಒಂದು ಮೂಲೆಯಲ್ಲಿ ಕುಳಿತುಕೊಂಡು, ನ್ಯೂಟನ್ನನು ತನ್ನನ್ನು ಕಂಡುಹಿಡಿಯುವುದಕ್ಕೆ ಬರುವನೆಂದು ಜಪ ಮಾಡುತ್ತಿದ್ದಿತೇನು? ಅದು ಆತನ ಮನಸ್ಸಿನಲ್ಲಿಯೇ ಇದ್ದಿತು. ಸಮಯ ಬಂದಿತು, ಆಗ ಅದು ಬಯಲಾಯಿತು. ಹೀಗೆ ಮನಸ್ಸೆಂಬುದು ಜಗತ್ತಿನ ಅನಂತಜ್ಞಾನದ ಭಂಡಾರವೇ ಆಗಿದೆ" ಎಂದು ಬಣ್ಣಿಸುತ್ತಾ, ವಿವೇಕಾನಂದರು ಈ ದೃಷ್ಟಾಂತಕ್ಕೆ ವಿಶಿಷ್ಟವಾದ ಸ್ವಾರಸ್ಯವನ್ನು ತುಂಬಿಸಿಕೊಟ್ಟಿದ್ದಾರೆ.



# ಛಾಯಾಚಿತ್ರಗಳಲ್ಲಿ ಸ್ವಾಮಿ ವಿವೇಕಾನಂದರು

ಕೆ.ಆರ್. ಮೋಹನ್

## ಛಾಯಾಚಿತ್ರ – ೩೧

ಈ ಚಿತ್ರವನ್ನು ತೆಗೆದಿದ್ದು ಗ್ರೀನ್‌ಏಕರ್ ಎಂಬ ಪ್ರದೇಶದಲ್ಲಿ, ೧೮೯೪ರ ಜುಲೈ ಕೊನೆಯ ಭಾಗದಲ್ಲಿ. ಆ ವರ್ಷದ ಜುಲೈ ೨೬ ರಿಂದ ಆಗಸ್ಟ್ ೧೪ರವರೆಗೆ ಸ್ವಾಮೀಜಿ ಗ್ರೀನ್‌ಏಕರ್ ಎಂಬ ಪ್ರದೇಶದಲ್ಲಿ ಉಳಿದುಕೊಂಡಿದ್ದರು. ಅಲ್ಲಿ ಅವರು ತಮ್ಮ ನಿಕಟ ಶಿಷ್ಯರಿಗೆ ತರಗತಿಗಳ ಸರಣಿಯೊಂದನ್ನು ಪ್ರಾರಂಭಿಸಿದರು. ಭಾರತೀಯ ಸಂಪ್ರದಾಯದಂತೆ ಶಿಷ್ಯರೆಲ್ಲರೂ ಒಂದು ಮರದ ಬುಡದಲ್ಲಿ ಅವರ ಸುತ್ತಲೂ ಕುಳಿತುಕೊಂಡು, ಬಹಳ ಶ್ರದ್ಧೆ ಮತ್ತು ಉತ್ಸಾಹದಿಂದ ಸ್ವಾಮೀಜಿ ವಿವರಿಸುತ್ತಿದ್ದ ವೇದಾಂತ ತತ್ತ್ವವನ್ನು ಆಲಿಸುತ್ತಿದ್ದರು. ಒಂದು ಪೈನ್ (ಪೀತದಾರು) ಮರದ ನೆರಳಿನಲ್ಲಿ ಈ ತರಗತಿಗಳು ನಡೆಯುತ್ತಿದ್ದವು. ಈ ಮರಕ್ಕೆ ಮುಂದೆ 'ಸ್ವಾಮೀಜಿಯವರ ಪೈನ್ ವೃಕ್ಷ' ಎಂದೇ ಹೆಸರಾಯಿತು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸ್ವಾಮೀಜಿ ಆಸಕ್ತರಿಗೆ ಅನೇಕ ತರಗತಿಗಳನ್ನು ನಡೆಸಿದ್ದಾರೆ. ಅವುಗಳಲ್ಲಿ ಇದೇ ಮೊದಲನೆಯದು ಎಂದು ಹೇಳಬಹುದು.

ಈ ತರಗತಿಗಳ ಕುರಿತಾಗಿ ಸ್ವಾಮೀಜಿ ಹೇಲ್ ಸಹೋದರಿಯರಿಗೆ ಹೀಗೆ ಪತ್ರ ಬರೆಯುತ್ತಾರೆ : "ನಾನು ಇವರಿಗೆಲ್ಲಾ 'ಶಿವೋಽಹಂ' 'ಶಿವೋಽಹಂ' ಎಂದು ಹೇಳಿಕೊಡುತ್ತಿದ್ದೇನೆ. ಇವರೆಲ್ಲ ಇದನ್ನು ಅನುಸರಿಸುತ್ತಿದ್ದಾರೆ. ಇವರು ಮುಗ್ಧರು, ಪರಿಶುದ್ಧರು. ಆದ್ದರಿಂದ ಅವರ ಧೈರ್ಯಕ್ಕೆ ಎಲ್ಲೆಯೇ ಇಲ್ಲ." ಸ್ವಾಮೀಜಿ ಈ ಶಿಷ್ಯರಿಗೆ ಸಾಮಾನ್ಯವಾಗಿ 'ಅವಧೂತಗೀತೆ'ಯನ್ನು ಪಾಠ ಮಾಡುತ್ತಿದ್ದರು. ಕೆಲವೊಮ್ಮೆ 'ರಾಜಯೋಗ'ವನ್ನೂ ಹೇಳಿಕೊಡುತ್ತಿದ್ದರು.


ಚಿತ್ರ : ೩೧

## ಛಾಯಾಚಿತ್ರ – ೩೨

ಈ ಚಿತ್ರವನ್ನು ತೆಗೆದದ್ದು ಕೂಡ ಗ್ರೀನ್‌ಏಕರ್‌ನಲ್ಲಿಯೇ. ತೆಗೆದ ದಿನಾಂಕ ೨.೮.೧೮೯೪. ಅಂದು ಡಾ. ಎಡ್ವರ್ಡ್ ಹೇಲ್ ಎಂಬುವವರ ಭಾಷಣವಿತ್ತು. ಇದಾದ ನಂತರ ಶಿಕಾಗೋ ವಿನಿಂದ ಬಂದಿದ್ದ ಕುಮಾರಿ ಸ್ಟಾಕ್‌ಹ್ಯಾಮ್ ಎಂಬಾಕೆ ಈ ಚಿತ್ರವನ್ನು ಟೆಂಟಿನ ಒಳಗಡೆ ತೆಗೆದಳು. ಈ ಚಿತ್ರದಲ್ಲಿ ಸ್ವಾಮೀಜಿ ನೆಲದ ಮೇಲೆ ಕುಳಿತಿದ್ದಾರೆ. ಅವರ ಪಕ್ಕದಲ್ಲಿ ಸಾರಾ ಫಾರ್ಮರ್ ಮತ್ತು ಡಾ. ಎಡ್ವರ್ಡ್ ಹೇಲ್ ಕುರ್ಚಿಗಳಲ್ಲಿ ಕುಳಿತಿದ್ದಾರೆ. ಇವರಿಬ್ಬರ ಮಧ್ಯದಲ್ಲಿ ಎಂ. ಹೆಚ್. ಗುಲೇಸಿಯನ್ ಎಂಬ ಮಹನೀಯರು ನಿಂತಿದ್ದಾರೆ. ಗ್ರೀನ್‌ಏಕರ್‌ನಲ್ಲಿ ಸಾರಾ ಫಾರ್ಮರ್ ಪ್ರತಿವರ್ಷವೂ 'ಧಾರ್ಮಿಕ ಸಮಾವೇಶ' ಎಂಬ ಅಧ್ಯಯನಕೂಟವನ್ನು ಆಯೋಜಿಸುತ್ತಿದ್ದಳು. ಆ ವರ್ಷ ಆಕೆ ಸ್ವಾಮಿ ವಿವೇಕಾನಂದರನ್ನು ಈ ಕೂಟಕ್ಕೆ ಆಹ್ವಾನಿಸಿದಳು. ಚಿತ್ರ ೩೧ ಮತ್ತು ಚಿತ್ರ ೩೨ – ಇವೆರಡೂ ಗ್ರೀನ್‌ಏಕರ್‌ನ ಬಹಾಯಿ ಸಾರ್ವಜನಿಕ ಪತ್ರಾಗಾರದಲ್ಲಿ ಇದ್ದವು. ಅವನ್ನು ಕಂಡುಹಿಡಿದು ಬೆಳಕಿಗೆ ತಂದವರು ಎಲ್ವಾ ನೆಲ್ಸನ್ ಎಂಬ ಭಕ್ತರು.


ಚಿತ್ರ : ೩೨

## ಛಾಯಾಚಿತ್ರ – ೩೩

ಈ ಚಿತ್ರದಲ್ಲಿ ಸ್ವಾಮೀಜಿ, ಗ್ರೀನ್‌ಏಕರ್‌ನ ಪ್ರಸಿದ್ಧ ಪೈನ್ ವೃಕ್ಷದ ಕೆಳಗೆ ನಿಂತಿರುವುದನ್ನು ಕಾಣಬಹುದು. ಆ ಸಂದರ್ಭದಲ್ಲಿ ಅವರು ಕೆಂಪು ನಿಲುವಂಗಿ ಮತ್ತು ಇಳಿಬಿಟ್ಟ ಹಳದಿ ಪೇಟವನ್ನು ಧರಿಸಿದ್ದರೆಂಬ ಮಾಹಿತಿ ದೊರಕಿದೆ. ತುಂಬು ನಗುಮುಖದಿಂದ ಕೂಡಿದ ಸ್ವಾಮೀಜಿ ಈ ಚಿತ್ರದಲ್ಲಿ ಶೋಭಾಯಮಾನವಾಗಿ ಕಾಣುತ್ತಿದ್ದಾರೆ. ಸ್ವಾಮೀಜಿಯ ಶಿಷ್ಯೆಯಾದ ಇಸಾಬೆಲ್ ಮೆಕಿಂಡ್ಲಿ ಈ ಚಿತ್ರವನ್ನು ಜೋಪಾನವಾಗಿ


ಚಿತ್ರ : ೩೩

ಇಟ್ಟುಕೊಂಡಿದ್ದಳು. ತನ್ನಲ್ಲಿ ಇರುವ ಸಂಪತ್ತುಗಳಲ್ಲೆಲ್ಲಾ, ಈ ಚಿತ್ರವೇ ಅತ್ಯಂತ ಅಮೂಲ್ಯ ನಿಧಿಯೆಂದು ಆಕೆ ಭಾವಿಸಿದ್ದಳು.

## ಛಾಯಾಚಿತ್ರ – ೩೪

ಈ ಚಿತ್ರವನ್ನು ಕೂಡ ೧೮೯೪ ರಲ್ಲಿ, ಗ್ರೀನ್‌ಏಕರ್‌ನಲ್ಲಿಯೇ ತೆಗೆಯಲಾಯಿತು. ಈ ಚಿತ್ರ ೧೮೯೯ರಲ್ಲಿ ವಾಟರ್‌ಟೌನ್ ಎಂಬ ಊರಿನ ದಿನಪತ್ರಿಕೆಯೊಂದರಲ್ಲಿ ಪ್ರಕಟವಾಯಿತು. ಅದರ ಪ್ರತಿ ಇದು. ಹಾಗಾಗಿ ಇದು ಅಷ್ಟು ಸ್ಪಷ್ಟವಾಗಿಲ್ಲ.

ಗ್ರೀನ್‌ಏಕರ್‌ನಲ್ಲಿ ಸುಮಾರು ೧೮ ದಿನಗಳ ಕಾಲ

ಚಿತ್ರ : ೩೪

